# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : **195**

ಸದಸ್ಯರ ಹೆಸರು : ಶ್ರೀ ಮಂಜುನಾಥ್ ಭಂಡಾರಿ
(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸಬೇಕಾದ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು

ಉತ್ತರಿಸಬೇಕಾದ ದಿನಾಂಕ : 05.03.2025

| | **ಪ್ರಶ್ನೆ** | **ಉತ್ತರ** |
|---|---|---|
| ಅ. | ರಾಜ್ಯದಲ್ಲಿ ಸುರಕ್ಷತೆ ಹಾಗೂ ಪ್ರಯಾಣಿಕರ ಹಿತದೃಷ್ಟಿಯಿಂದ ಸರ್ಕಾರಿ ಹಾಗೂ ಖಾಸಗಿ ವಾಹನಗಳು ಪಾಲಿಸಬೇಕಾದ ಸಾರಿಗೆ ನಿಯಮಗಳು ಯಾವುವು? ಬಸ್ಸುಗಳಲ್ಲಿ ನಿಂತು ಪ್ರಯಾಣಿಸಬಹುದಾದ ಗರಿಷ್ಟ ಪ್ರಯಾಣಿಕರ ಸಂಖ್ಯೆಯನ್ನು ಹೇಗೆ ನಿಗಧಿಮಾಡಲಾಗುತ್ತಿದೆ; ಪರಿಶೀಲಿಸುವ ಕ್ರಮಗಳಾವುವು; (ವಿವರ ನೀಡುವುದು) | ಮೋಟಾರು ವಾಹನಗಳ ಕಾಯ್ದೆ 1988 ಮತ್ತು ಅದರಡಿ ರಚಿತವಾದ ನಿಯಮಗಳನ್ವಯ ನೋಂದಣಿಯಾಗುವ ಸಾರಿಗೆ ವಾಹನಗಳನ್ನು ಪ್ರತಿ 02 ವರ್ಷಕ್ಕೊಮ್ಮೆ ವಾಹನದ ಅರ್ಹತಾ ಪತ್ರ ನವೀಕರಣದ ಸಮಯದಲ್ಲಿ ಕೇಂದ್ರ ಮೋಟಾರು ವಾಹನಗಳ ನಿಯಮಗಳು 1989ರ, ನಿಯಮ 62ರಲ್ಲಿನ ಮಾನದಂಡಗಳನ್ನು ಪೂರೈಸಿದ ನಂತರ ನವೀಕರಣ ಮಾಡಲು ಅವಕಾಶ ಕಲ್ಪಿಸಲಾಗಿರುತ್ತದೆ.<br>ಅಲ್ಲದೆ, ಸುರಕ್ಷತೆ ಹಾಗೂ ಪ್ರಯಾಣಿಕರ ಹಿತದೃಷ್ಟಿಯಿಂದ ಸರ್ಕಾರಿ ಹಾಗೂ ಖಾಸಗಿ ವಾಹನಗಳು ಮೋಟಾರು ವಾಹನಗಳ ಕಾಯ್ದೆ 1988ರ ಕಲಂ 84 ಮತ್ತು ಕರ್ನಾಟಕ ಮೋಟಾರು ವಾಹನಗಳ ನಿಯಮಗಳು 1989ರ, ನಿಯಮ 70ರಲ್ಲಿ ನಿಗಧಿಪಡಿಸಿರುವ ರಹದಾರಿ ನಿಬಂಧನೆಗಳನ್ನು ಪಾಲಿಸಬೇಕಾಗಿರುತ್ತದೆ.<br>ಕರ್ನಾಟಕ ಮೋಟಾರು ವಾಹನಗಳ ನಿಯಮಗಳು 1989ರ, ನಿಯಮ 152ರನ್ವಯ ಬಸ್ಸುಗಳಲ್ಲಿ ನಿಂತು ಪ್ರಯಾಣಿಸಬಹುದಾದ ಗರಿಷ್ಠ ಪ್ರಯಾಣಿಕರ ಸಂಖ್ಯೆಯನ್ನು ನಿಗಧಿಪಡಿಸಲಾಗಿರುತ್ತದೆ. ವಾಹನದ ಅರ್ಹತಾ ಪತ್ರ ನವೀಕರಣ ಸಮಯದಲ್ಲಿ ಪರಿಶೀಲಿಸಿ ಕ್ರಮ ವಹಿಸಲಾಗುತ್ತಿದೆ. |
| ಆ. | ಸಾರ್ವಜನಿಕ ಪ್ರಯಾಣಿಕ ವಾಹನಗಳಾದ ಬಸ್ಸುಗಳಲ್ಲಿ ಸಾರಿಗೆ ಇಲಾಖೆ ನಿಯಮಗಳಾನುಸಾರ ಇರಬೇಕಾದ ಸೌಕರ್ಯಗಳು ಯಾವುವು; ಅವುಗಳನ್ನು ಸಾರಿಗೆ ಇಲಾಖೆಯಲ್ಲಿ ವಾಹನ ದಾಖಲಿಸುವಾಗ (ಪಾಸಿಂಗ್) ನಿಯಾಮನುಸಾರ ಇದ್ದು ನಂತರ ಅದನ್ನು ಮಾರ್ಪಡಿಸದೆ ಇರುವ ಬಗ್ಗೆ ಖಾತರಿಪಡಿಸುವ ವ್ಯವಸ್ಥೆಯಿದೆಯೇ; | ಸಾರ್ವಜನಿಕ ಪ್ರಯಾಣಿಕ ವಾಹನಗಳಾದ ಬಸ್ಸುಗಳಲ್ಲಿ ಸರಕು ಇಡುವ ಕ್ಯಾರಿಯರ್, ಪ್ರಥಮ ಚಿಕಿತ್ಸೆ ಪೆಟ್ಟಿಗೆ, ತುರ್ತು ನಿರ್ಗಮನ ಬಾಗಿಲು, ಬಸ್ಸುಗಳನ್ನು ಹತ್ತಲು ಮತ್ತು ಇಳಿಯಲು ಮೆಟ್ಟಿಲುಗಳ ಸೌಕರ್ಯ ಹಾಗೂ ಕೇಂದ್ರ ಮೋಟಾರು ವಾಹನ ನಿಯಮಾವಳಿಗಳು 1989ರ ನಿಯಮ 128 (A) ಮತ್ತು ಕರ್ನಾಟಕ ಮೋಟಾರು ವಾಹನ ನಿಯಮಾವಳಿ 1989ರ ನಿಯಮ 136 ರಲ್ಲಿ ತಿಳಿಸಲಾಗಿರುವ ನಿಯಮಗಳನ್ವಯ ಹಾಗೂ ಸಾರಿಗೆ ಇಲಾಖೆಯ ನಿಯಮಗಳ ಅನುಸಾರ ಅಗತ್ಯ ಸೌಕರ್ಯಗಳನ್ನು ಹೊಂದಿರಬೇಕಾಗಿರುತ್ತದೆ. |

| | | |
|---|---|---|
| | | ಮುಂದುವರೆದು, ಪ್ರವರ್ತನ ಸಮಯದಲ್ಲಿ ಸಾರಿಗೆ ಇಲಾಖೆಯ ನಿಯಮಗಳನುಸಾರ ಮೇಲೆ ತಿಳಿಸಿರುವ ಸೌಕರ್ಯಗಳು ಇಲ್ಲದೇ ಇರುವುದು ಅಥವಾ ಅದನ್ನು ಮಾರ್ಪಡಿಸಿರುವುದು ಕಂಡು ಬಂದಲ್ಲಿ ಅಂತಹ ವಾಹನಗಳ ವಿರುದ್ಧ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುತ್ತಿದೆ.<br>2024-25ನೇ ಸಾಲಿನಲ್ಲಿ **ಇಂತಹ** ಒಟ್ಟು 220 ವಾಹನಗಳ ವಿರುದ್ಧ ಪ್ರಕರಣಗಳನ್ನು ದಾಖಲಿಸಿ ಒಟ್ಟು ರೂ.23,77,833/-ಗಳನ್ನು ದಂಡದ ರೂಪದಲ್ಲಿ ಸಂಗ್ರಹಿಸಲಾಗಿರುತ್ತದೆ. |
| ಇ. | ಖಾಸಗಿ ಪ್ರಯಾಣಿಕ ಬಸ್ಸುಗಳಲ್ಲಿ ಡಿಜೆ ಸೌಂಡ್‌ಸಿಸ್ಟಂ ಮತ್ತು ಎಲ್.ಇ.ಡಿ. ಲೈಟುಗಳನ್ನು ಅಳವಡಿಸಲು ಮತ್ತು ಪ್ರವಾಸಿ ಬಸ್ಸುಗಳಲ್ಲಿ ಡ್ಯಾನ್ಸಿಂಗ್ ಫ್ಲೋರ್ ವ್ಯವಸ್ಥೆ ಅಳವಡಿಸಲು ನಿಯಮಗಳಲ್ಲಿ ಅವಕಾಶವಿದೆಯೇ;<br>ಇಲ್ಲದಿದ್ದಲ್ಲಿ ಈ ಬಗ್ಗೆ ಇಲಾಖೆ ಪರಿಶೀಲನೆ ನಡೆಸಿದ ವರದಿಗಳಿವೆಯೇ; (ವಿವರ ನೀಡುವುದು) | ಖಾಸಗಿ ಪ್ರಯಾಣಿಕ ಬಸ್ಸುಗಳಲ್ಲಿ ಡಿಜೆ ಸೌಂಡ್ ಸಿಸ್ಟಂ ಮತ್ತು ಎಲ್.ಇ.ಡಿ. ಲೈಟುಗಳನ್ನು ಅಳವಡಿಸಲು ಮತ್ತು ಪ್ರವಾಸಿ ಬಸ್ಸುಗಳಲ್ಲಿ ಡ್ಯಾನ್ಸಿಂಗ್ ಫ್ಲೋರ್ಸ್ ವ್ಯವಸ್ಥೆ ಅಳವಡಿಸಲು ನಿಯಮಗಳಲ್ಲಿ ಯಾವುದೇ ಅವಕಾಶವಿರುವುದಿಲ್ಲ.<br>ಮುಂದುವರೆದು, 2024-25ನೇ ಸಾಲಿನಲ್ಲಿ ಖಾಸಗಿ ಪ್ರಯಾಣಿಕ ಬಸ್ಸುಗಳಲ್ಲಿ ಎಲ್.ಇ.ಡಿ. ಲೈಟುಗಳ ಅಳವಡಿಕೆ ಸಂಬಂಧ ಒಟ್ಟು 477 ಪ್ರಕರಣಗಳನ್ನು ದಾಖಲಿಸಿ ರೂ.1,03,500/- ಗಳನ್ನು ದಂಡದ ರೂಪದಲ್ಲಿ ಸಂಗ್ರಹಿಸಲಾಗಿರುತ್ತದೆ. ಆದರೆ ಡಿಜೆ ಸೌಂಡ್ ಸಿಸ್ಟಂ ಮತ್ತು ಡ್ಯಾನ್ಸಿಂಗ್ ಫ್ಲೋರ್ಸ್ ಅಳವಡಿಸಿರುವ ವಾಹನಗಳ ವಿರುದ್ಧ ಯಾವುದೇ ಪ್ರಕರಣಗಳು ವರದಿಯಾಗಿರುವುದಿಲ್ಲ. |
| ಈ. | ಖಾಸಗಿ ಪ್ರಯಾಣಿಕ ಬಸ್ಸುಗಳಲ್ಲಿ ಪ್ರಯಾಣಿಕರ ಸೀಟುಗಳ ನಡುವಿನ ಅಂತರ ಸರಕು ಇಡುವ ಕ್ಯಾರಿಯರ್ ಪ್ರಥಮ ಚಿಕಿತ್ಸೆ ಪೆಟ್ಟಿಗೆ, ತುರ್ತು ನಿರ್ಗಮನ ಬಾಗಿಲು, ಬಸ್ಸುಗಳ ಮೆಟ್ಟಿಲುಗಳ ಎತ್ತರ ಇತ್ಯಾದಿಗಳನ್ನು ಪ್ರಯಾಣಿಕರಿಗೆ ಅನುಕೂಲವಾಗಿರುವಂತೆ ಖಾತರಿಪಡಿಸುವ ಬಗ್ಗೆ ಪ್ರಸ್ತುತ ಚಾಲ್ತಿಯಲ್ಲಿರುವ ವ್ಯವಸ್ಥೆ ಯಾವುದು; ಈ ಕುರಿತು ವರದಿ ಮತ್ತು ವಿವರ ನೀಡುವುದು? | ಕರ್ನಾಟಕ ಮೋಟಾರು ವಾಹನಗಳ ನಿಯಮಗಳು 1989 ರ ನಿಯಮಗಳು 1989ರ ನಿಯಮ 171 ರಡಿ ಮಜಲು ವಾಹನಗಳಲ್ಲಿ ಪ್ರಥಮ ಚಿಕಿತ್ಸೆ ಪೆಟ್ಟಿಗೆ ಮತ್ತು ಅದಕ್ಕೆ ಸಂಬಂಧಿಸಿದ ವೈದ್ಯಕೀಯ ಪರಿಕರಗಳನ್ನು ನಿರ್ವಹಣೆ ಮಾಡುವ ಕುರಿತು ನಿಗದಿಪಡಿಸಿದೆ. ಕೇಂದ್ರ ಮೋಟಾರು ವಾಹನ ನಿಯಮಗಳು 1989ರ ನಿಯಮ 128(4) ರಡಿ ವಾಹನಗಳಿಗೆ ತುರ್ತು ನಿರ್ಗಮನ ಕುರಿತು ನಿಗದಿಪಡಿಸಿದೆ. ಬಸ್ಸುಗಳಲ್ಲಿ ಇರಬೇಕಾದ ಸುರಕ್ಷತಾ ವ್ಯವಸ್ಥೆ ಕುರಿತಂತೆ ಕೇಂದ್ರ ಮೋಟಾರು ವಾಹನಗಳ ನಿಯಮಗಳು 1989ರ ನಿಯಮ 125(ಸಿ) ರಲ್ಲಿ ನಿಗದಿಪಡಿಸಿದೆ ಹಾಗೂ ಬಸ್ಸುಗಳಲ್ಲಿನ ಮೆಟ್ಟಿಲುಗಳ ಎತ್ತರಕ್ಕೆ ಸಂಬಂಧಿಸಿದಂತೆ ಮಾನದಂಡಗಳನ್ನು Bus Body Code AIS-052 (Rev.1) ರಲ್ಲಿ ನಿಗದಿಪಡಿಸಲಾಗಿದೆ. |

**ಟಿಡಿ 4 ಟಿಡಿಕ್ಯೂ 2025**

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಮುಜರಾಯಿ ಸಚಿವರು